ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಚಿಕ್ಕಮಗಳೂರು
ಸಿ.ಸಿ.ನಂ. 44 :2018

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅನಿಲ್ ಕುಮಾರ್ | ಪಿ.ಡಬ್ಲ್ಯೂಃ 14 |
| ತಂದೆಯ ಹೆಸರು | : | ಸಂಗನಬಸಪ್ಪ | ಸಿ.ಡಬ್ಲ್ಯೂಃ 30 |
| ವಯಸ್ಸು | : | 54 ವರ್ಷ | |
| ವೃತ್ತಿ | : | ಎಸ್ ಪಿ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ | |
| ವಾಸ | : | ಬೆಳಗಾಂ | |

ದಿನಾಂಕಃ 29-10-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ದಂ.ಪ್ರ.ಸಂ ಕಲಂ 299 ರ ಸಾಕ್ಷಿಯ ವಿಚಾರಣೆ ಃ ಎಪಿಪಿ ರವರಿಂದ ಃ

ನಾನು ಮಾರ್ಚ 2006 ರಿಂದ ಸೆಪ್ಟಂಬರ್ 2006 ರವರೆಗೆ ಚಿಕ್ಕಮಗಳೂರಿನ ಪೋಲಿಸ್ ಅಧೀಕ್ಷಕರ ಕಛೇರಿಯ ಜಿಲ್ಲಾ ಅಪರಾಧ ವಿಭಾಗದ ಪೋಲಿಸ್ ನಿರೀಕ್ಷಕನೆಂದು ಕೆಲಸ ನಿರ್ವಹಿಸಿರುತ್ತೇನೆ ಮತ್ತು ಸದರಿ ಸಮಯದಲ್ಲಿ ಚಿಕ್ಕಮಗಳೂರು ನಗರ ವೃತ್ತದ ಪ್ರಭಾರ ಸಿಪಿಐ ಎಂದೂ ಕೆಲಸ ನಿರ್ವಹಿಸಿರುತ್ತೇನೆ. ದಿಃ 17.05.2006 ರಂದು ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ-29 ರವರಿಂದ ಪಡೆದು ಅಲ್ಲಿಯವರೆಗೆ ಆದ ತನಿಖಾ ಕಾಗದ ಪತ್ರಗಳನ್ನು ಪರಿಶೀಲಿಸಿರುತ್ತೇನೆ. ಆ ಸಮಯದಲ್ಲಿ ಈ ಕೇಸಿನ ದಸ್ತಗಿರಿಯಾದ ಆರೋಪಿಯನ್ನೂ ಕೂಡ ನನ್ನ ಮುಂದೆ ಹಾಜರುಪಡಿಸಿದ್ದು ಇರುತ್ತದೆ. ಆದಿನ ಸಮಯ ಆಗಿದ್ದಕಾರಣ ನಮ್ಮ ಮಹಿಳಾ ಸಿಬ್ಬಂದಿಯ ಸುಪರ್ದಿಯಲ್ಲಿ ಆರೋಪಿಯನ್ನು ಠಾಣೆಯಲ್ಲಿ ಇರಿಸಿಕೊಂಡು ನಂತರ ದಿಃ 18.05.2006 ರಂದು ಆರೋಪಿ ಘಟನಾ ಸ್ಥಳವನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಠಾಣೆಗೆ ಚಾಸಾ-8 ಮತ್ತು 9 ಇವರನ್ನು ಬರಮಾಡಿಕೊಂಡು ನಂತರ ಆರೋಪಿ ತೋರಿಸುವ ಸ್ಥಳಕ್ಕೆ ನಾನು, ನನ್ನ ಸಿಬ್ಬಂದಿ ಹಾಗೂ ಚಾಸಾ-8 ಮತ್ತು 9 ಕೂಡಿಕೊಂಡು ಆರೋಪಿಯೊಂದಿಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಪಂಚರ ಸಮಕ್ಷಮ ಆರೋಪಿ ತೋರಿಸಿದ ಜಾಗವನ್ನು ಈಗಾಗಲೇ ಗುರುತಿಸಿದ ನಿಪಿ-7 ರಂತೆ ಪಂಚನಾಮೆ ಮಾಡಿರುತ್ತೇನೆ. ನಿಪಿ-7 ರಲ್ಲಿಯ ಸಾಕ್ಷಿ ಸಹಿಯನ್ನು ನಿಪಿ-7(ಸಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಸ್ಥಳದ ಕಚ್ಚಾ ನಕಾಶೆಯನ್ನೂ ಕೂಡ ತಯಾರಿಸಿರುತ್ತೇನೆ. ಈಗ ನೋಡುತ್ತಿರುವ ನಕಾಶೆ ಅದುವೇ ಇದ್ದು ಅದನ್ನು ನಿಪಿ-19 ಎಂದು, ಸಾಕ್ಷಿ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿಯೊಂದಿಗೆ ಠಾಣೆಗೆ ಹಿಂದಿರುಗಿ ನಂತರ ಚಾಸಾ-10

ಮತ್ತು 11 ಇವರನ್ನು ಠಾಣೆಗೆ ಬರಮಾಡಿಕೊಂಡು ಈಗಾಗಲೇ ಗುರುತಿಸಿದ ನಿಪಿ-8 ರಂತೆ ಪಂಚನಾಮೆಯನ್ನು ಮಾಡಿ ಆರೋಪಿಯು ಬರೆದಿದ್ದ ನಿಪಿ-5 ಮತ್ತು 6 ಎಂದು ಗುರುತಿಸಿದ ಪತ್ರಗಳು ಕಡತದಲ್ಲಿದ್ದು ಅವುಗಳನ್ನು ಜಪ್ತುಗೊಳಿಸಿದ ಬಗ್ಗೆ ಪಂಚನಾಮೆ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಆರೋಪಿಯ ಬರವಣಿಗೆಯನ್ನು ಕಾಗದದಲ್ಲಿ ಈಗಾಗಲೇ ಗುರುತಿಸಿದ ನಿಪಿ-9 ರಿಂದ 14 ರಂತೆ ಇರುವ ದಾಖಲೆಯಲ್ಲಿ ಬರೆಸಿಕೊಂಡಿರುತ್ತೇವೆ. ನಂತರ ದಸ್ತಗಿರಿ ಮಾಡಿದ ಆರೋಪಿಯ ಬಗ್ಗೆ ದಸ್ತಗಿರಿ ಕ್ರಮ ಕೈಗೊಂಡು ರಿಮ್ಯಾಂಡ್ ಯಾದಿಯೊಂದಿಗೆ ನ್ಯಾಯಾಲಯಕ್ಕೆ ಸಿಬ್ಬಂದಿ ಮೂಲಕ ಹಾಜರುಪಡಿಸಿರುತ್ತೇನೆ. ಆನಂತರ ಚಾಸಾ-12 ರಿಂದ 28 ಇವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ಚಾಸಾ-9 ಇವರು ನನ್ನ ಮುಂದೆ ನಿಪಿ-15 ರಂತೆ ಹೇಳಿಕೆಯನ್ನು ನೀಡಿರುತ್ತಾನೆ. ಜಪ್ತುಗೊಳಿಸಿದ ಪತ್ರಗಳನ್ನು ಸೂಕ್ತ ರೀತಿಯಲ್ಲಿ ಪ್ಯಾಕ್ ಮಾಡಿ ಅವುಗಳನ್ನು ಸಿಬ್ಬಂದಿ ಮುಖಾಂತರ ದಿಃ 22.05.2006 ರಂದು ಎಫ್ ಎಸ್ ಎಲ್ ಗೆ ಪರೀಕ್ಷೆ ಕುರಿತು ಕಳುಹಿಸಿರುತ್ತೇನೆ. ನಂತರ ದಿಃ 23.05.2006 ರಂದು ನನ್ನ ಸಿಬ್ಬಂದಿ ಪತ್ರಗಳನ್ನು ಎಫ್ ಎಸ್ ಎಲ್ ಗೆ ನೀಡಿದ ಬಗ್ಗೆ ರಶೀದಿ ತಂದು ಹಾಜರುಪಡಿಸಿದ್ದು ಅದನ್ನು ತನಿಖೆಯಲ್ಲಿ ಅಳವಡಿಸಿಕೊಂಡಿರುತ್ತೇನೆ. ಆರೋಪಿಯು ಬೇರೆ ಬೇರೆ ವಿಳಾಸ ಇರುವ ದಾಖಲೆಗಳನ್ನು ತನ್ನ ಬಳಿ ಹೊಂದಿದ್ದು ಅವುಗಳ ಬಗ್ಗೆ ಪರಿಶೀಲಿಸಲು ನಮ್ಮ ಠಾಣೆಯ ಸಿಬ್ಬಂದಿಯಾದ ರವಿ ಇವರನ್ನು ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ದಾಖಲೆಗಳಲ್ಲಿ ಕಾಣಿಸಿದ ವಿಳಾಸಕ್ಕೆ ನನ್ನ ಸಿಬ್ಬಂದಿ ಹೋಗಿ ವಿಚಾರಿಸಿದ್ದು ಸದರಿ ವಿಳಾಸದಲ್ಲಿದ್ದ ವ್ಯಕ್ತಿಗಳು ಸದರಿ ವಿಳಾಸ ಇರುವ ಕಾರ್ಡಗಳನ್ನು ತಾವು ಆರೋಪಿಗೆ ಕೊಟ್ಟಿಲ್ಲವೆಂದು ಹೇಳಿದ್ದು ಆ ಬಗ್ಗೆ ರವಿ ಇವರು ನನ್ನ ಮುಂದೆ ಹಾಜರಾಗಿ ವರದಿ ಮಾಡಿಕೊಂಡಿರುತ್ತಾರೆ. ಅದಾದನಂತರ ಆರೋಪಿ ಮೇಲೆ ಹೇಳಿದ ವಿಳಾಸ ಇರುವ ಕಾರ್ಡಗಳನ್ನು ತನ್ನ ತಂದೆ ತನಗೆ ಕೊಟ್ಟಿದ್ದಾಗಿ ಹೇಳಿದ್ದು ಅದರಿಂದ ದಿಃ 29.06.2006 ರಂದು ಆರೋಪಿಯ ತಂದೆಯಾದ ಚಾಸಾ-27 ಸುಭಾಷಚಂದ್ರ ಇವರನ್ನು ಠಾಣೆಗೆ ಕರೆಸಿ ಅವರ ಹೇಳಿಕೆಯನ್ನು ಪಡೆದಿರುತ್ತೇನೆ. ಸದರಿ ಸಮಯದಲ್ಲಿ ಅವರು ಆ ಕಾರ್ಡಗಳನ್ನು ತಾನು ತನ್ನ ಮಗಳಿಗೆ ಕೊಡಿಸಿಲ್ಲವೆಂದು ನನ್ನ ಮುಂದೆ ಹೇಳಿರುತ್ತಾರೆ. ದಿಃ 11.07.2006 ಕ್ಕೆ ಲಬ್ಯವಿರುವ ದಾಖಲೆಗಳನ್ನು ಪರಿಶೀಲಿಸಿ ಎಫ್ ಎಸ್ ಎಲ್ ವರದಿ ಬರುವುದನ್ನು ಬಾಕಿ ಇಟ್ಟು ಆರೋಪಿಯು ತನಿಖೆಯಲ್ಲಿ ಆರೋಪ ಮಾಡಿರುವುದು ಕಂಡುಬಂದ ಕಾರಣ ಅವಳ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ. ಆರೋಪಿ ದೀಪಾ

ಇವರನ್ನು ನೋಡಿದ್ದಲ್ಲಿ ನಾನು ಗುರುತಿಸುತ್ತೇನೆ. ( ಈ ಕೇಸಿನ ಆರೋಪಿಯು ಪರಾರಿಯಾಗಿರುವುದು ದಾಖಲೆಯಿಂದ ಕಂಡುಬರುತ್ತದೆ )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ ಚಿಕ್ಕಮಗಳೂರು.